# ಕೆಐಎಡಿಬಿ ಭೂಮಿ ಗೋಲ್ಮಾಲ್: ಕೆಎಎಸ್ ಅಧಿಕಾರಿ, ವ್ಯಕ್ತಿಗೆ ಜೈಲು

## ಆರೆಬಿನ್ನಮಂಗಲ ನಿವಾಸಿ ಮುನಿಕೃಷ್ಣಪ್ಪ ಅವರ 2.10 ಎಕರೆ ಜಾಗ ಕೆಐಎಡಿಬಿ ವಶ

## ಈ ಜಾಗಕ್ಕೆ ಮುನಿರಾಜು ಹೆಸರಲ್ಲಿ ದಾಖಲೆ ಸೃಷ್ಟಿ । ಅಧಿಕಾರಿಗೆ ಶಿಕ್ಷೆ ವಿಧಿಸಿದ ಕೋರ್ಟ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಭೂ ಸ್ವಾಧೀನಪಡಿಸಿಕೊಂಡಿದ್ದ ಜಮೀನಿಗೆ ಭೂ ಪರಿಹಾರ ನೀಡುವಲ್ಲಿ ಮಂಡಳಿಯ ಬೊಕ್ಕಸಕ್ಕೆ 1.39 ಕೋಟಿ ರು. ನಷ್ಟ ಉಂಟು ಮಾಡಿದ ಆರೋಪದ ಮೇರೆಗೆ ಭೂಸ್ವಾಧೀನ ವಿಶೇಷಾಧಿಕಾರಿ ಮತ್ತು ಖಾಸಗಿ ವ್ಯಕ್ತಿಗೆ ಲೋಕಾಯುಕ್ತ ವಿಶೇಷ ನ್ಯಾಯಾಲಯ ಎರಡು ವರ್ಷ ಜೈಲು ಶಿಕ್ಷೆ ಮತ್ತು ₹2 ಲಕ್ಷ ದಂಡ ವಿಧಿಸಿದೆ.

2010ರಲ್ಲಿ ದಾಖಲಾದ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಲಯ ಈ ತೀರ್ಪು ನೀಡಿದೆ. ಕೆಐಎಡಿಬಿ ಭೂ ಸ್ವಾಧೀನ ವಿಶೇಷಾಧಿಕಾರಿಯಾಗಿದ್ದ ಚಿಕ್ಕ ಬೆಟ್ಟಯ್ಯ, ಖಾಸಗಿ ವ್ಯಕ್ತಿ ಮುನಿರಾಜು ಶಿಕ್ಷೆಗೊಳಗಾದ ಅಪರಾಧಿಗಳಾಗಿದ್ದಾರೆ.

ಬೆಂಗಳೂರಿನ ಅರೆಬಿನ್ನಮಂಗಲ ಗ್ರಾಮದ ಮುನಿಕೃಷ್ಣಪ್ಪ ಎಂಬುವರಿಗೆ ಸೇರಿದ 2.10 ಎಕರೆ ಜಮೀನನ್ನು ಕೆಐಎಡಿಬಿ 2010ರಲ್ಲಿ ಭೂ



ಸ್ವಾಧೀನಪಡಿಸಿಕೊಂಡಿದ್ದು, ಈ ಸಂಬಂಧ ಭೂ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಲಾಗಿತ್ತು. ಆಗ ಭೂ ಸ್ವಾಧೀನ ವಿಶೇಷಾಧಿಕಾರಿಯಾಗಿದ್ದ ಚಿಕ್ಕಬೆಟ್ಟಯ್ಯ, ಭೂ ಪರಿಹಾರ ಒದಗಿಸಲು ₹10 ಲಕ್ಷ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು. ಈ ನಡುವೆ, ಮುನಿಕೃಷ್ಣಪ್ಪ ಅವರ ಜಮೀನನ್ನು ಮುನಿರಾಜು ತನ್ನ ಜಮೀನು ಎಂದು ಬಿಂಬಿಸಿಕೊಂಡು ಭೂ ಪರಿಹಾರ ಕೋರಿ ಅರ್ಜಿ ಸಲ್ಲಿಸಿದ್ದ. ನಂತರ ಚಿಕ್ಕಬೆಟ್ಟಯ್ಯ, ಮುನಿರಾಜು ಒಳಸಂಚು ನಡೆಸಿ ಸರ್ವೇಯರ್ ತಿಮ್ಮಾರೆಡ್ಡಿ ಅವರಿಗೆ ತಪ್ಪು ಮಾಹಿತಿ ನೀಡಿ ಸುಳ್ಳು ವರದಿ ತಯಾರಿಸುವಂತೆ ಕುಮ್ಮಕ್ಕು ನೀಡಿದ್ದರು.

ಮುನಿರಾಜುಗೆ ಅನುಕೂಲವಾಗುವಂತೆ ಚಿಕ್ಕಬೆಟ್ಟಯ್ಯ ವರದಿ ತರಿಸಿಕೊಂಡಿದ್ದರು. ಇದಕ್ಕೆ ಮುನಿಕೃಷ್ಣಪ್ಪ ಪುತ್ರ ರಮೇಶ್ ಆಕ್ಷೇಪ ಸಲ್ಲಿಸಿ ತಕರಾರು ಅರ್ಜಿ ಸಲ್ಲಿಸಿದ್ದರು. ಆದರೂ ತಕರಾರು ಅರ್ಜಿಯನ್ನು ಅಧಿಕಾರಿ ಚಿಕ್ಕಬೆಟ್ಟಯ್ಯ ಪರಿಗಣಿಸದೆ ಕಾನೂನು ಬಾಹಿರವಾಗಿ ಮುನಿರಾಜುಗೆ ₹1.39 ಕೋಟಿ ಪರಿಹಾರ ರೂಪದಲ್ಲಿ ಸಿಗುವಂತೆ ಮಾಡಿದ್ದರು. ಈ ಬಗ್ಗೆ ಮುನಿಕೃಷ್ಣಪ್ಪ ಕುಟುಂಬಸ್ಥರು 2010 ಸೆಪ್ಟೆಂಬರ್‌ನಲ್ಲಿ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿದ ಲೋಕಾಯುಕ್ತ ಪೊಲೀಸರು ಸತ್ಯಾಂಶ ಪತ್ತೆ ಹಚ್ಚಿದ್ದರು. 2011 ಜೂನ್‌ನಲ್ಲಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.